# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯ ಸಿವಿಲ್ ಸೇವೆಯ ಅಧಿಕಾರಿ ಮತ್ತು ನೌಕರರುಗಳ ಗೃಹ ನಿರ್ಮಾಣ ಮುಂಗಡ ಮೊತ್ತವನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ:

1. ಸರ್ಕಾರಿ ಆದೇಶ ಸಂಖ್ಯೆ:ಆಇ 4 ಎ.ಹೆಚ್.ಬಿ. 99, ದಿನಾಂಕ: 18.01.1999.
2. ದಿನಾಂಕ: 12.3.2012ರ ಅಧಿಕಾರಿ ವೇತನ ಸಮಿತಿ 2011ರ ವರದಿ
3. ಭಾರತೀಯ ಆಡಳಿತ ಸೇವಾ ಅಧಿಕಾರಿಗಳ ಸಂಘ, ಕರ್ನಾಟಕ, ಬೆಂಗಳೂರು, ಇವರ ಪತ್ರ ಸಂಖ್ಯೆ: ಐಎಎಸ್:ಒಎ:32:2011-12 ದಿ: 2.2.2012

ಪ್ರಸ್ತಾವನೆ:

ಮೇಲೆ ಕ್ರ. ಸಂ. (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಅಖಿಲ ಭಾರತ ಆಡಳಿತ ಸೇವೆಗಳಿಗೆ ಸೇರಿದ ಅಧಿಕಾರಿಗಳನ್ನು ಒಳಗೊಂಡಂತೆ ರಾಜ್ಯ ಸರ್ಕಾರಿ ನೌಕರನಿಗೆ ಗೃಹ ನಿರ್ಮಾಣ/ ಗೃಹ ಖರೀದಿಗಾಗಿ, ಗರಿಷ್ಠ 5 ಲಕ್ಷ ರೂಪಾಯಿ ಮಿತಿ ಒಳಪಟ್ಟಂತೆ ಆತನ 50 ತಿಂಗಳ ವೇತನವನ್ನು ಮುಂಗಡವಾಗಿ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿತ್ತು. ಅಧಿಕಾರಿ ವೇತನ ಸಮಿತಿಯು ದಿನಾಂಕ:12.03.2012ರಂದು ಸರ್ಕಾರಕ್ಕೆ ನೀಡಿರುವ ವರದಿಯಲ್ಲಿ ರಾಜ್ಯ ಸರ್ಕಾರಿ ನೌಕರರುಗಳಿಗೆ ಗೃಹ ನಿರ್ಮಾಣ ಮತ್ತು ಖರೀದಿ ಮುಂಗಡದ ಮಿತಿಯನ್ನು ರೂ. 5.00 ಲಕ್ಷಗಳಿಂದ ರೂ. 15.00 ಲಕ್ಷಗಳಿಗೆ ಹೆಚ್ಚಿಸಲು ಶಿಫಾರಸ್ಸು ಮಾಡಿತ್ತು. ಮೇಲೆ ಓದಲಾದ ಕ್ರಸಂ. (2)ರಲ್ಲಿನ ಅಧಿಕಾರಿ ವೇತನ ಸಮಿತಿ 2011ರ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ನಿರ್ಣಯದಲ್ಲಿ ಗೃಹ ನಿರ್ಮಾಣ ಮತ್ತು ಗೃಹ ಖರೀದಿ ಮುಂಗಡವನ್ನು ರೂ.5.00 ಲಕ್ಷಗಳಿಂದ ರೂ.15.00 ಲಕ್ಷಗಳಿಗೆ ಪರಿಷ್ಕರಿಸಲು ಮಾಡಿರುವ ಶಿಫಾರಸ್ಸನ್ನು ಅಂಗೀಕರಿಸಲು ಸರ್ಕಾರವು ತೀರ್ಮಾನಿಸಿರುತ್ತದೆ.

ಉಲ್ಲೇಖ (3)ರಲ್ಲಿ ಓದಲಾದ ಪತ್ರದಲ್ಲಿ ಭಾರತೀಯ ಆಡಳಿತ ಸೇವಾ ಅಧಿಕಾರಿಗಳ ಸಂಘ, ಕರ್ನಾಟಕ, ಬೆಂಗಳೂರು, ಇವರು ರಾಜ್ಯದಲ್ಲಿ ನಿವೇಶನ ಮತ್ತು ಮನೆ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದ ಸಾಮಗ್ರಿಗಳು ಹಾಗೂ ಕೂಲಿ ವೆಚ್ಚ ಇತ್ತೀಚೆಗೆ ಹಲವು ಪಟ್ಟು ಹೆಚ್ಚಾಗಿರುವ ಹಿನ್ನೆಲೆಯಲ್ಲಿ ತಮಿಳುನಾಡು ಸರ್ಕಾರವು ಅಲ್ಲಿ ಸೇವೆ ಸಲ್ಲಿಸುತ್ತಿರುವ ಅಖಿಲ ಭಾರತೀಯ ಸೇವೆಗಳ ಅಧಿಕಾರಿಗಳಿಗೆ ಮನೆ ಕಟ್ಟಲು ನೀಡಿವ ಮುಂಗಡದ ಮೊತ್ತದ ಗರಿಷ್ಟ ಮಿತಿಯನ್ನು ರೂ.7.50 ಲಕ್ಷದಿಂದ ರೂ.25 ಲಕ್ಷಕ್ಕೆ ಏರಿಸಿದಂತೆ, ಪ್ರಸ್ತುತ ರಾಜ್ಯ ಸರ್ಕಾರವು ನೀಡುತ್ತಿರುವ ಮನೆ ನಿರ್ಮಾಣ ಮುಂಗಡ ಗರಿಷ್ಠ ಮಿತಿಯನ್ನು ರೂ.25 ಲಕ್ಷಕ್ಕೆ ಹೆಚ್ಚಿಸಲು ಮನವಿ ಮಾಡಿರುತ್ತಾರೆ. ಇದನ್ನು ಕೂಲಂಕುಷವಾಗಿ ಪರಿಶೀಲಿಸಿ, ಪ್ರಸ್ತುತ ಗೃಹ ನಿರ್ಮಾಣ ಸಾಮಗ್ರಿಗಳು ಮತ್ತು ನಿರ್ಮಾಣ ವೆಚ್ಚಗಳು ಹೆಚ್ಚಾಗಿರುವುದರಿಂದ ಮತ್ತು ಸರ್ಕಾರದ ಅಧಿಕಾರಿಗಳು ಸ್ವಂತ ಮನೆ ಹೊಂದುವುದರಿಂದ ಸರ್ಕಾರದ ವಸತಿ ನಿಲಯಗಳಿಗೂ ಬೇಡಿಕೆ ಬಹುತೇಕ ಕಡಿಮೆಯಾಗುವ ಅಂಶವನ್ನು ಪರಿಗಣಿಸಿ ರಾಜ್ಯ ಸಿವಿಲ್ ಸೇವೆಯ 'ಎ' ಗುಂಪಿನ ಅಧಿಕಾರಿಗಳಿಗೆ ಗೃಹ ನಿರ್ಮಾಣ ಮತ್ತು ಖರೀದಿ ಮುಂಗಡ ಮಿತಿಯನ್ನು ಹಾಗೂ ಅದರಂತೆ ಕರ್ನಾಟಕ ವೃಂದಕ್ಕೆ ಸೇರಿದ ಅಖಿಲ ಭಾರತೀಯ ಸೇವಾ ಅಧಿಕಾರಿಗಳಿಗೆ ರೂ.25.00 ಲಕ್ಷಗಳಿಗೆ ಅಧಿಕಾರಿಗಳ ಮರುಪಾವತಿಸುವ ಸಾಮರ್ಥ್ಯಕ್ಕನುಗುಣವಾಗಿ ಹೆಚ್ಚಿಸುವುದು ಸೂಕ್ತವೆಂದು ನಿರ್ಣಯಿಸಲಾಗಿದೆ.

ಈ ಏರಿಕೆಯಿಂದಾಗಿ ಅಖಿಲ ಭಾರತ ಸೇವೆಗಳಿಗೆ ಸೇರಿದ ಅಧಿಕಾರಿಗಳು ರಾಜ್ಯ ಸಿವಿಲ್ ಸೇವೆಯ 'ಎ' ಗುಂಪಿನ ಅಧಿಕಾರಿಗಳಂತೆ ಗರಿಷ್ಠ ರೂ. 25.00 ಲಕ್ಷ ಗೃಹ ನಿರ್ಮಾಣ ಮುಂಗಡ ಪಡೆಯಲು ಅರ್ಹರಾಗುವುದನ್ನು ಪರಿಶೀಲಿಸಿ ಸರ್ಕಾರ ಈ ಮುಂದಿನಂತೆ ಆದೇಶಿಸಿದೆ.

## ಸರ್ಕಾರಿ ಆದೇಶ ಸಂಖ್ಯೆ: ಆಇ 02 ಮಕಮು 2012, ಬೆಂಗಳೂರು, ದಿನಾಂಕ: 20ನೇ ಜನವರಿ 2014

1. ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ರಾಜ್ಯ ಸಿವಿಲ್ ಸೇವೆಯ 'ಎ' ಗುಂಪಿನ ಅಧಿಕಾರಿಗಳಿಗೆ ಅವರು ಪಡೆಯುತ್ತಿರುವ 70 ತಿಂಗಳ ವೇತನಕ್ಕೆ ಅನುಗುಣವಾಗಿ ಹಾಗು ಮರುಪಾವತಿ ಸಾಮರ್ಥ್ಯದನುಸಾರ ಗೃಹ ನಿರ್ಮಾಣ ಮತ್ತು ಖರೀದಿ ಮುಂಗಡ ಮಿತಿಯನ್ನು ರೂ.25.00 ಲಕ್ಷಗಳಿಗೆ ಹೆಚ್ಚಿಸಲು ಮತ್ತು ರಾಜ್ಯ ಸಿವಿಲ್ ಸೇವೆಯ ಇತರೆ ಅಧಿಕಾರಿಗಳು ಮತ್ತು ನೌಕರರಿಗೆ ಗೃಹ ನಿರ್ಮಾಣ ಮತ್ತು ಖರೀದಿ ಮುಂಗಡ ಮಿತಿಯನ್ನು ರೂ.15.00 ಲಕ್ಷಕ್ಕೆ ಹೆಚ್ಚಿಸಲು ಆದೇಶಿಸಲಾಗಿದೆ.

... 2

2. ಈ ಆದೇಶದಿಂದ ಕರ್ನಾಟಕ ವೃಂದಕ್ಕೆ ಸೇರಿ ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಖಿಲ ಭಾರತ ಸೇವೆಗಳಿಗೆ ಸೇರಿದ ಅಧಿಕಾರಿಗಳು ಅವರ 70 ತಿಂಗಳ ಮೂಲ ವೇತನ ಮತ್ತು ವೇತನ ಶ್ರೇಣಿಯ ಗ್ರೇಡ್ ವೇತನವು ಸೇರಿದಂತೆ ಅವರ ಮರುಪಾವತಿ ಸಾಮರ್ಥ್ಯಕ್ಕನುಗುಣವಾಗಿ ರಾಜ್ಯ ಸಿವಿಲ್ ಸೇವೆಯ 'ಎ' ಗುಂಪಿನ ಅಧಿಕಾರಿಗಳಂತೆ ಗರಿಷ್ಠ ರೂ.25.00 ಲಕ್ಷ ಗೃಹ ನಿರ್ಮಾಣ ಮುಂಗಡವನ್ನು ಪಡೆಯಲು ಅರ್ಹರಿರುತ್ತಾರೆ.

3. ರಾಜ್ಯ ಸಿವಿಲ್ ಸೇವೆಯ ಅಧಿಕಾರಿಗಳು ಮತ್ತು ನೌಕರರಿಗೆ ಗೃಹ ನಿರ್ಮಾಣ/ಖರೀದಿ ಮುಂಗಡ ಮಂಜೂರು ಮಾಡಲು ಸಾಲ ನೀಡುವ ಹಣಕಾಸು ಸಂಸ್ಥೆಯನ್ನು ಆಯ್ಕೆ ಮಾಡುವ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಪೂರ್ಣಗೊಂಡ ನಂತರ ಮುಂಗಡ ಮಂಜೂರು ಮಾಡುವ ಬಗ್ಗೆ ಇತರೆ ಷರತ್ತು ಮತ್ತು ನಿಬಂಧನೆಗಳನ್ನು, ಬಡ್ಡಿ ದರವನ್ನು ಹಾಗೂ ಕರ್ನಾಟಕ ಆರ್ಥಿಕ ಸಂಹಿತೆಗೆ ಸಂಬಂಧಪಟ್ಟಂತೆ ಸೂಕ್ತ ತಿದ್ದುಪಡಿಯನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

4. ಅಖಿಲ ಭಾರತೀಯ ಸೇವಾ ಅಧಿಕಾರಿಗಳಿಗೆ ಸಂಬಂಧಿಸಿದಂತೆ, ರಾಜ್ಯದ ಆಯವ್ಯಯದಿಂದ ಬಿಡುಗಡೆ ಮಾಡುವ ಪ್ರಸ್ತುತ ಪದ್ಧತಿಯು ಮುಂದುವರೆಯುತ್ತದೆ.

5. ಈ ಬಗ್ಗೆ ಕರ್ನಾಟಕ ಆರ್ಥಿಕ ಸಂಹಿತೆ ಪರಿಚ್ಛೇದ 211ಕ್ಕೆ ಸೂಕ್ತ ತಿದ್ದುಪಡಿಯನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಎನ್. ಲಕ್ಷ್ಮಣ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

ಗೆ:

1. ಮಹಾಲೇಖಪಾಲರು (ಲೆಕ್ಕಪತ್ರ & ತನಿಖೆ), ಕರ್ನಾಟಕ, ಬೆಂಗಳೂರು,
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು,
3. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು,
4. ಎಲ್ಲಾ ಇಲಾಖಾ ಮುಖ್ಯಸ್ಥರುಗಳು,
5. ಎಲ್ಲಾ ಜಿಲ್ಲಾಧಿಕಾರಿಗಳು/ಜಿಲ್ಲಾ ಪಂಚಾಯತಿಯ ಎಲ್ಲಾ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು,
6. ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು,
7. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, ಬೆಂಗಳೂರು,
8. ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಕಂದಾಯಭವನ, ಬೆಂಗಳೂರು,
9. ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು,
10. ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಸಭೆ/ ವಿಧಾನ ಪರಿಷತ್ತು, ವಿಧಾನಸೌಧ, ಬೆಂಗಳೂರು,
11. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು,
12. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ)- ದಿನಾಂಕ: 10.01.2014ರ ಸಭೆಯ ಕಾರ್ಯಸೂಚಿ ಕ್ರ. ಸಂ. (9)ರಲ್ಲಿನ ನಿರ್ಣಯದಂತೆ,
13. ಸರ್ಕಾರದ ಜಂಟಿ ಕಾರ್ಯದರ್ಶಿಗಳು (ಎಫ್ಆರ್ ಮತ್ತು ಬಿಸಿಸಿ), ಆರ್ಥಿಕ ಇಲಾಖೆ - ಕರ್ನಾಟಕ ಆರ್ಥಿಕ ಸಂಹಿತೆಗೆ ಸೂಕ್ತ ತಿದ್ದುಪಡಿ ಹೊರಡಿಸಲು ಕ್ರಮ ಕೈಗೊಳ್ಳಲು,
14. ಸರ್ಕಾರದ ಜಂಟಿ ಕಾರ್ಯದರ್ಶಿಗಳು (ಸೇವೆಗಳು-2), ಆರ್ಥಿಕ ಇಲಾಖೆ,
15. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು,
16. ಆರ್ಥಿಕ ಇಲಾಖೆಯ ಗಣಕ ಕೋಶ-ಆರ್ಥಿಕ ಇಲಾಖೆಯ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು,
17. ಕಛೇರಿ ಪ್ರತಿ/ಶಾಖಾರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

- - -